# || ಶ್ರೀಮದ್ಭಗವದ್ಗೀತೆ ಶುದ್ಧ ಉಚ್ಚಾರಣಾ ಮಾರ್ಗದರ್ಶಿ – ಸ್ತರ 3 ||

## ವಿಶಿಷ್ಟ ಸ್ವರ ಮತ್ತು ಅದರ ಮಾತ್ರೆಗಳು -

- 'ಋ' ಮತ್ತು 'ೠ' ಸಂಸ್ಕೃತದ ಸ್ವರಗಳ ಉಚ್ಚಾರಣೆಯು ವ್ಯಂಜನಾಕ್ಷರದ ರೀತಿ ಇರುತ್ತದೆ, ಆದರೆ ಅವು ವ್ಯಂಜನಾಕ್ಷರವಲ್ಲ. ಅದರ ಮಾತ್ರೆಗಳು ಹೀಗಿವೆ : ◌ೃ ಮತ್ತು ◌ೄ . ಇದರಲ್ಲಿ ಮೊದಲನೆಯದು ಹ್ರಸ್ವ ಸ್ವರ ಮತ್ತು ಎರಡನೆಯದು ದೀರ್ಘ ಸ್ವರ.

## ಅಕ್ಷರಗಳ ಸಂಯೋಗದಿಂದ ರೇಫದ ಸ್ಥಾನ -

- ಅಕ್ಷರ 'ರ್' ಕಾರವನ್ನು ಯಾವುದೇ ಅಕ್ಷರದೊಂದಿಗೆ ಸಂಯೋಗವಾದಾಗ ರೇಫದ ಸ್ಥಾನ ಎರಡು ಪ್ರಕಾರಗಳಲ್ಲಿರುತ್ತದೆ. ಮೊದಲನೆಯದು ಅಕ್ಷರದ ಮೇಲೆ ರ್◌ ಈ ರೀತಿ ಬರೆಯಲಾಗುತ್ತದೆ, ಉದಾ: (ಕರ್ಮ) ಮತ್ತು ಎರಡನೆಯದಾಗಿ ಅಕ್ಷರದ ಕೆಳಗೆ ◌್ರ ಈ ರೀತಿ ಬರೆಯಲಾಗುತ್ತದೆ, ಉದಾ: (ಕ್ರಮ).

## ಸಂಯುಕ್ತಾಕ್ಷರವನ್ನು (ಜೋಡಕ್ಷರ) ಬರೆಯುವ ರೀತಿ ಮತ್ತು ಅದರ ಉಚ್ಚಾರಣೆಯ ಕ್ರಮ -

ಸಂಯುಕ್ತಾಕ್ಷರವನ್ನು ಸಂಸ್ಕೃತದಲ್ಲಿ ಎರಡು ಪ್ರಕಾರಗಳಲ್ಲಿ ಬರೆಯಬಹುದು.

- ಮೊದಲನೆಯ ರೀತಿಯಲ್ಲಿ 'ಮೊದಲನೆಯ ಅಕ್ಷರದ ಮೇಲೆ ಇನ್ನೊಂದು'; ಇದರಲ್ಲಿ ಮೊದಲ ವ್ಯಂಜನಾಕ್ಷರವನ್ನು ಮೇಲೆ ಬರೆದು, ಅನಂತರ ಎರಡನೆಯ ಅಕ್ಷರವನ್ನು ಅದರ ಕೆಳಗೆ ಬರೆಯಲಾಗುತ್ತದೆ. ಉದಾ: उद्भव (ಉದ್ಭವ)
- ಎರಡನೆಯ ರೀತಿಯಲ್ಲಿ ವ್ಯಂಜನಾಕ್ಷರಗಳ ಕ್ರಮದಲ್ಲಿ, ಅವು ಹೇಗೆ ಇದೆಯೋ ಹಾಗೆ ಬರೆಯಲಾಗುತ್ತದೆ. ಉದಾ: (ಉದ್‌ಭವ)
  ಈ ಎರಡೂ ರೀತಿಯಲ್ಲಿ ಯಾವ ಅಕ್ಷರವು ಮೊದಲಿದೆಯೋ ಅದರ ಉಚ್ಚಾರಣೆಯನ್ನು ಮೊದಲು ಮತ್ತು ಅನಂತರ ಉಳಿದ ಅಕ್ಷರಗಳನ್ನು ಕ್ರಮದಲ್ಲಿ ಉಚ್ಚರಿಸಬೇಕು. ಉದಾ: (ಉದ್‌ಭವ)



ಬೇರೆ ಯಾವುದೇ ಸ್ಥಳದಲ್ಲಿ ಗೀತಾ ಪರಿವಾರ ಸಾಹಿತ್ಯವನ್ನು ಬಳಸಲು ಪೂರ್ವಾನುಮತಿ ಅಗತ್ಯವಿದೆ.

# ಸಂಧಿ - ನಿಯಮ

ಪೂರ್ವ ಪದದ ಕೊನೆಯ ಅಕ್ಷರ ಮತ್ತು ಉತ್ತರ ಪದದ ಮೊದಲ ಅಕ್ಷರಗಳ ಮಧ್ಯೆ ಸಂಯೋಗದಿಂದ ಉಂಟಾಗುವ ಪದಕ್ಕೆ ಸಂಧಿಪದ ಎಂದೂ, ಈ ಕ್ರಿಯೆಯನ್ನು ಸಂಧಿ ಎಂದೂ ಕರೆಯುತ್ತಾರೆ. ಹಾಗೆಯೇ ಈ ಅಕ್ಷರಗಳಲ್ಲಿ ಸ್ವಲ್ಪ ವ್ಯತ್ಯಾಸವೂ ಸಹ ಆಗುತ್ತದೆ. ಈ ಕ್ರಿಯೆಯಲ್ಲಿ ಅರ್ಥ ಬದಲಾವಣೆಯಾಗಬಾರದು. ಅದರಲ್ಲಿ ಎರಡೂ ಅಕ್ಷರಗಳು ಸ್ವರವಾಗಿದ್ದರೆ ಅದನ್ನು **ಸ್ವರ ಸಂಧಿ**ಯೆಂದೂ, ಅದರಲ್ಲಿ ಒಂದು ಅಕ್ಷರವು ವ್ಯಂಜನವಾಗಿದ್ದರೆ ಅದನ್ನು **ವ್ಯಂಜನ ಸಂಧಿ**ಯೆಂದೂ ಕರೆಯುತ್ತಾರೆ. ಹಾಗೆಯೇ ಅನುಸ್ವಾರದ ಸ್ಥಳದಲ್ಲಿ ಬದಲಾವಣೆಯಾದರೆ, **ಅನುಸ್ವಾರ ಸಂಧಿ**ಯೆಂದೂ ಮತ್ತು ವಿಸರ್ಗದ ಸ್ಥಳದಲ್ಲಿ ಬದಲಾವಣೆಯಾದರೆ, **ವಿಸರ್ಗ ಸಂಧಿ**ಯೆಂದೂ ಕರೆಯುತ್ತಾರೆ. ಸಂಧಿಯಾಗುವ ಪದಗಳಲ್ಲಿ ಕೆಲವು ಸಲ ಒಂದು ಅಕ್ಷರ ಬದಲಾವಣೆಯಾಗುತ್ತದೆ ಅಥವಾ ಎರಡು ಅಕ್ಷರಗಳಲ್ಲಿ ಬದಲಾವಣೆಯಾಗುತ್ತದೆ. ಈ ಸಂಧಿಪದದಲ್ಲಿ, ಅಕ್ಷರಗಳ ಬದಲಾವಣೆ ಅಂದರೆ ಏನು ಮತ್ತು ಹೇಗೆ ಎಂಬುದನ್ನು ವಿಸ್ತಾರವಾಗಿ ತಿಳಿದುಕೊಳ್ಳೋಣ.

## ಸ್ವರ ಅಥವಾ ಅಚ್ ಸಂಧಿ –

ಸ್ವರ ಸಂಧಿಯು ಎರಡು ಸ್ವರಗಳ ಮಧ್ಯೆ ಸಂಭವಿಸುತ್ತದೆ.  ಇದರಲ್ಲಿ ಸ್ವರದ ಬದಲಾವಣೆಯಾಗುವ ಕಾರಣದಿಂದ ಇದನ್ನು ಸ್ವರ-ಸಂಧಿ ಎಂದು ಕರೆಯುತ್ತಾರೆ. ಸ್ವರ ಸಂಧಿಯಲ್ಲಿ ಹಲವು ಪ್ರಕಾರಗಳಿವೆ.

### 1. ದೀರ್ಘ ಸಂಧಿ - ಅಕಃ ಸವರ್ಣೇ ದೀರ್ಘಃ

ಎರಡು ಸಜಾತೀಯ ಸ್ವರಗಳ ಮಧ್ಯೆ ಸಂಧಿಯಾದಾಗ, ಆ ಎರಡು ಸ್ವರಗಳ ಸ್ಥಾನದಲ್ಲಿ ಅದರ ಸಜಾತೀಯ **ದೀರ್ಘ ಸ್ವರ** ಬರುತ್ತದೆ.

| ಸಂಧಿಯಾಗುವ ಎರಡು ಸ್ವರಗಳು | | ಎರಡು ಸ್ವರಗಳ ಸ್ಥಾನದಲ್ಲಿ ಬರುವ ದೀರ್ಘ ಸ್ವರ | ಉದಾಹರಣೆ |
|---|---|---|---|
| ಅ/ಆ | ಅ/ಆ | ಆ | ಭಯ್ + **ಅ** + **ಅ**ಭಯೇ = ಭ**ಯಾ**ಭಯೇ (18/30) |
| ಇ/ಈ | ಇ/ಈ | ಈ | ಭ್ರುಮತ್ + **ಇ** + **ಇ**ವ = ಭ್ರುಮ**ತೀ**ವ(1/30) |
| ಉ/ಊ | ಉ/ಊ | ಊ | ತೇಷ್ + **ಉ** + **ಉ**ಪಜಾಯತೇ = ತೇ**ಷೂ**ಪಜಾಯತೇ(2/62) |
| ಋ/ೠ | ಋ/ೠ | ೠ | ಪಿತ್ + **ಋ** + **ಋ**ಣಮ್ = ಪಿ**ತೄ**ಣಮ್ (ಗೀತೆಯಲ್ಲಿ ಈ ತರಹದ ಸಂಧಿ ಪ್ರಯೋಗವಾಗಿಲ್ಲ) |

### 2. ಗುಣ ಸಂಧಿ - ಅದೇಙ್ ಗುಣಃ

ಸಂಧಿಯಾಗುವ ಸ್ವರಗಳಲ್ಲಿ ಮೊದಲನೆಯ ಸ್ವರವು '**ಅ/ಆ**' ಆಗಿದ್ದು ಮತ್ತು ಎರಡನೆಯ ಸ್ವರವು '**ಇ/ಈ**', '**ಉ/ಊ**' '**ಋ/ೠ**' ಅಥವಾ '**ಌ**', ಇವುಗಳಲ್ಲಿ ಯಾವುದಾದರೂ ಒಂದು ಸ್ವರವಾದರೆ, ಆ ಎರಡು ಸ್ವರಗಳ ಸ್ಥಾನದಲ್ಲಿ ಕ್ರಮವಾಗಿ '**ಏ**', '**ಓ**', '**ಅರ್**' ಮತ್ತು '**ಅಲ್**' ಎಂದಾಗುತ್ತದೆ.

| ಸಂಧಿಯಾಗುವ ಎರಡು ಸ್ವರಗಳು | | ಎರಡು ಸ್ವರಗಳ ಸ್ಥಾನದಲ್ಲಿ ಬರುವ ಗುಣಾದೇಶ | ಉದಾಹರಣೆ |
|---|---|---|---|
| ಅ/ಆ | ಇ/ಈ | ಏ | ವಿಗತ್ + **ಅ** + **ಇ**ಚ್ಛಾ = ವಿಗ**ತೇ**ಚ್ಛಾ (5/28) |
| | ಉ/ಊ | ಓ | ಪುರ್ + **ಆ** + **ಉ**ವಾಚ = ಪು**ರೋ**ವಾಚ(3/10) |
| | ಋ/ೠ | ಅರ್ | ಮಹ್ + **ಆ** + **ಋ**ಷೀಣಾಮ್ = ಮ**ಹರ್ಷೀ**ಣಾಮ್(10/2) |
| | ಌ | ಅಲ್ | ತವ್ + **ಅ** + **ಌ**ಕಾರಃ = ತ**ವಲ್ಕಾ**ರಃ (ತವಲ್ಕಾರಃ) (ಗೀತೆಯಲ್ಲಿ ಈ ತರಹದ ಸಂಧಿ ಪ್ರಯೋಗವಾಗಿಲ್ಲ) |


ಬೇರೆ ಯಾವುದೇ ಸ್ಥಳದಲ್ಲಿ ಗೀತಾ ಪರಿವಾರ ಸಾಹಿತ್ಯವನ್ನು ಬಳಸಲು ಪೂರ್ವಾನುಮತಿ ಅಗತ್ಯವಿದೆ.

## 3. ಯಣ್ ಸಂಧಿ - ಇಕೋ ಯಣಚಿ

ಸಂಧಿಯಾಗುವ ಸ್ವರಗಳಲ್ಲಿ ಮೊದಲನೆಯ ಸ್ವರವು **'ಇ'**, **'ಉ'**, **'ಋ'** ಅಥವಾ **'ಌ'** ಹ್ರಸ್ವ ಅಥವಾ ದೀರ್ಘ ಆಗಿದ್ದು ಎರಡನೆಯ ಸ್ವರವು ಯಾವುದೇ ವಿಜಾತೀಯ ಸ್ವರವಾಗಿದ್ದು, ಸಂಧಿಯಾದಾಗ ಮೊದಲನೆಯ ಸ್ವರದ ಸ್ಥಾನದಲ್ಲಿ ಕ್ರಮವಾಗಿ **'ಯ್'**, **'ವ್'**, **'ರ್'** ಮತ್ತು **'ಲ್'**, ಇವು ವ್ಯಂಜನಾಕ್ಷರದಲ್ಲಿ ಆದೇಶವಾಗಿ ಎರಡನೆಯ ಸ್ವರದ ಜೊತೆ ಸಂಯೋಗಗೊಳ್ಳುತ್ತದೆ.

| ಸಂಧಿಯಾಗುವ ಮೊದಲನೆಯ ಸ್ವರ | ಸಂಧಿಯಾಗುವ ಎರಡನೆಯ ಸ್ವರ | ಮೊದಲನೆಯ ಸ್ವರ ಸ್ಥಾನದಲ್ಲಿ ಆಗುವ ಯಣಾದೇಶ | ಉದಾಹರಣೆ |
|---|---|---|---|
| ಇ/ಈ | ಯಾವುದೇ ಅನ್ಯ ಸ್ವರ | ಯ್ | ಕರ್ಮಣ್ + **ಇ** + **ಏ**ವ = ಕ**ರ್ಮಣ್ಯೇ**ವ (2/47) |
| ಉ/ಊ | | ವ್ | ತ್ + **ಉ** + **ಏ**ವಾಹಮ್ = **ತ್ವೇ**ವಾಹಮ್(2/12) |
| ಋ/ೠ | | ರ್ | ಜಾಗ್ + **ಋ** + **ಅ**ತಿ = ಜಾಗ್ರತಿ (2/69) |
| ಌ | | ಲ್ | **ಌ** + **ಆ**ಕೃತಿಃ = **ಲಾ**ಕೃತಿಃ<br>(ಗೀತೆಯಲ್ಲಿ ಈ ತರಹದ ಸಂಧಿ ಪ್ರಯೋಗವಾಗಿಲ್ಲ) |

## 4. ವೃದ್ಧಿ ಸಂಧಿ - ವೃದ್ಧಿರಾದೈಚ್

ಸಂಧಿಯಾಗುವ ಸ್ವರಗಳಲ್ಲಿ ಮೊದಲನೆಯ ಸ್ವರವು **'ಅ'** ಅಥವಾ **'ಆ'** ಆಗಿದ್ದು ಮತ್ತು ಎರಡನೆಯ ಸ್ವರವು **'ಏ/ಐ'**, ಅಥವಾ **'ಓ/ಔ'** ಆಗಿದ್ದು, ಸಂಧಿಯಾದಾಗ ಅವೆರಡು ಸ್ವರಗಳ ಸ್ಥಾನದಲ್ಲಿ ಕ್ರಮವಾಗಿ **'ಐ'** ಮತ್ತು **'ಔ'** ಸ್ವರಗಳು ಬರುತ್ತದೆ.

| ಸಂಧಿಯಾಗುವ ಮೊದಲನೆಯ ಸ್ವರ | ಸಂಧಿಯಾಗುವ ಎರಡನೆಯ ಸ್ವರ | ಎರಡು ಸ್ವರಗಳ ಸ್ಥಾನದಲ್ಲಿ ಆಗುವ ವೃದ್ಧಿ-ಆದೇಶ | ಉದಾಹರಣೆ |
|---|---|---|---|
| ಅ/ಆ | ಏ/ಐ | ಐ | ಸಹಸ್ + **ಆ** + **ಏ**ವ = ಸಹ**ಸ್ರೈ**ವ(1/13) |
| | ಓ/ಔ | ಔ | ಉತ್ತಮ್ + **ಅ** + **ಓ**ಜಾಃ = ಉತ್ತ**ಮೌ**ಜಾಃ (1/13) |

## 5. ಅಯಾದಿ ಸಂಧಿ – ಏಚೋಽಯವಾಯಾವಃ

ಸಂಧಿಯಾಗುವ ಸ್ವರಗಳಲ್ಲಿ ಮೊದಲನೆಯ ಸ್ವರವು **'ಏ'**, **'ಐ'**, **'ಓ'** ಅಥವಾ **'ಔ'** ಆಗಿದ್ದು ಮತ್ತು ಎರಡನೆಯ ಸ್ವರವು **'ಯಾವುದೇ ಸ್ವರವಾಗಿದ್ದು'**, ಮೊದಲನೆಯ ಸ್ವರ ಸ್ಥಾನದಲ್ಲಿ ಕ್ರಮವಾಗಿ **'ಅಯ್'**, **'ಆಯ್'**, **'ಅವ್'** ಮತ್ತು **'ಆವ್'** ಆದೇಶವಾಗಿ ಎರಡನೆಯ ಸ್ವರದ ಜೊತೆ ಸಂಯೋಗಗೊಳ್ಳುತ್ತದೆ.

| ಸಂಧಿಯಾಗುವ ಮೊದಲನೆಯ ಸ್ವರ | ಸಂಧಿಯಾಗುವ ಎರಡನೆಯ ಸ್ವರ | ಮೊದಲನೆಯ ಸ್ವರ ಸ್ಥಾನದಲ್ಲಿ ಆಗುವ ಅಯಾದಿ-ಆದೇಶ | ಉದಾಹರಣೆ |
|---|---|---|---|
| ಏ | ಯಾವುದೇ ಸ್ವರ | ಅಯ್ | ರಾಜರ್ಷ್ + **ಏ** + **ಅಃ** = ರಾಜ**ರ್ಷ**ಯಃ (4/2) |
| ಐ | | ಆಯ್ | ನ್ + **ಐ** + **ಅಕಾಃ** = **ನಾಯ**ಕಾಃ (1/7) |
| ಓ | | ಅವ್ | ಮನ್ + **ಓ** + **ಏ** = ಮ**ನವೇ**(4/1) |
| ಔ | | ಆವ್ | ದ್ವ್ + **ಔ** + **ಇ**ಮೌ = **ದ್ವಾವಿ**ಮೌ (15/16) |


ಬೇರೆ ಯಾವುದೇ ಸ್ಥಳದಲ್ಲಿ ಗೀತಾ ಪರಿವಾರ ಸಾಹಿತ್ಯವನ್ನು ಬಳಸಲು ಪೂರ್ವಾನುಮತಿ ಅಗತ್ಯವಿದೆ.

### 6. ಪೂರ್ವರೂಪ ಸಂಧಿ - ಏಙಃ ಪದಾಂತಾದತಿ

ಸಂಧಿಯಾಗುವ ಸ್ವರಗಳಲ್ಲಿ, ಮೊದಲನೆಯ ಸ್ವರವು **'ಏ'** ಅಥವಾ **'ಓ'** ಆಗಿದ್ದು ಮತ್ತು ಎರಡನೆಯ ಸ್ವರವು **'ಅ'** ಬಂದಾಗ, ಈ ಎರಡು ಸ್ವರಗಳ ಸ್ಥಾನದಲ್ಲಿ ಕ್ರಮವಾಗಿ **'ಏ'** ಮತ್ತು **'ಓ'** ಸ್ವರವು ಬರುತ್ತದೆ. ಈ ಸಂಧಿ ಕ್ರಿಯೆಯಲ್ಲಿ **'ಅ'** ಕಾರವು ಲೋಪವಾದ ಕಾರಣ **ಅವಗ್ರಹ ऽ ಚಿನ್ಹೆ**ಯನ್ನು ಬಳಸಲಾಗುತ್ತದೆ.

| ಸಂಧಿಯಾಗುವ ಮೊದಲನೆಯ ಸ್ವರ | ಸಂಧಿಯಾಗುವ ಎರಡನೆಯ ಸ್ವರ | ಎರಡು ಸ್ವರಗಳ ಸ್ಥಾನದಲ್ಲಿ ಆಗುವ ಪೂರ್ವರೂಪ - ಆದೇಶ | ಉದಾಹರಣೆ |
|---|---|---|---|
| ಏ | ಅ | ಏऽ | ತ್ + ಏ + ಅಭಿಹಿತಾ = ತೇऽಭಿಹಿತಾ(2/39) |
| ಓ | ಅ | ಓऽ | ದೃಷ್ಟ್ + ಓ + ಅಂತಃ = ದೃಷ್ಟೋऽಂತಃ (2/16) |

## ಸಾಮಾನ್ಯ ಶಬ್ದಾವಳಿ

- **ವರ್ಣಮಾಲಾ**

  **ಸ್ವರ** - ಅ, ಆ, ಇ, ಈ, ಉ, ಊ, ಋ, ೠ, ಏ, ಐ, ಓ, ಔ

  **ವ್ಯಂಜನ -**

  - **ಕಂಠ್ಯ** - ಕ್ ಖ್ ಗ್ ಘ್ ಙ್
  - **ತಾಲವ್ಯ** - ಚ್ ಛ್ ಜ್ ಝ್ ಞ್
  - **ಮೂರ್ಧನ್ಯ** - ಟ್ ಠ್ ಡ್ ಢ್ ಣ್
  - **ದಂತ್ಯ** - ತ್ ಥ್ ದ್ ಧ್ ನ್
  - **ಓಷ್ಠ್ಯ** - ಪ್ ಫ್ ಬ್ ಭ್ ಮ್

- **ಅಂತಃಸ್ಥ**- ಈ ಅಕ್ಷರಗಳ ಉಚ್ಚಾರಣೆಯು ಬಾಯಿಂದ ಗಾಳಿಯನ್ನು ಹೊರಗೆ ಬಿಡದೆ ಬಾಯಿಯ ಒಳಗೆ ಉಚ್ಚಾರವಾಗುವುದು. ಆದ್ದರಿಂದ ಇವುಗಳನ್ನು ಅಂತಃಸ್ಥ ವರ್ಣವೆಂದು ಕರೆಯುತ್ತೇವೆ. ಅವು ಯಾವುವೆಂದರೆ - ಯ್, ರ್, ವ್ ಮತ್ತು ಲ್.

- **ಊಷ್ಮ** - ಈ ಅಕ್ಷರಗಳ ಉಚ್ಚಾರಣೆಯು ಬಾಯಿಯ ಒಳಗೆ ಆಗುತ್ತದೆ. ಆದ್ದರಿಂದ ಇವುಗಳನ್ನು ಊಷ್ಮ ವರ್ಣವೆಂದು ಕರೆಯುತ್ತೇವೆ. ಅವು ಯಾವುವೆಂದರೆ - ಶ್, ಷ್, ಸ್ ಮತ್ತು ಹ್.

- **ಮೃದು ವ್ಯಂಜನ** - ವ್ಯಂಜನದ ಐದು ವರ್ಗಗಳ ಮೂರು, ನಾಲ್ಕು, ಐದನೆಯ ಅಕ್ಷರಗಳು (ಗ್, ಘ್, ಙ್, ಜ್, ಝ್, ಞ್, ಡ್, ಢ್, ಣ್, ದ್, ಧ್, ನ್, ಬ್, ಭ್, ಮ್), ಅಂತಃಸ್ಥ ಅಕ್ಷರಗಳು (ಯ್,ರ್, ಲ್, ವ್) ಹಾಗೂ ಹ್ ಅಕ್ಷರ, ಇವುಗಳನ್ನು ಮೃದು ವ್ಯಂಜನವೆಂದು ಕರೆಯುತ್ತೇವೆ.

- **ಕಠೋರ ವ್ಯಂಜನ** - ವ್ಯಂಜನದ ಐದು ವರ್ಗಗಳ ಮೊದಲ ಮತ್ತು ಎರಡನೆಯ ಅಕ್ಷರಗಳು (ಕ್, ಖ್, ಚ್, ಛ್, ಟ್, ಠ್, ತ್, ಥ್, ಪ್, ಫ್) ಹಾಗೂ ಶ್, ಷ್, ಸ್ ಅಕ್ಷರಗಳು, ಇವುಗಳನ್ನು ಕಠೋರ ವ್ಯಂಜನವೆಂದು ಕರೆಯುತ್ತೇವೆ.

- **ಅಲ್ಪಪ್ರಾಣ ವ್ಯಂಜನ** - ಯಾವ ಅಕ್ಷರಗಳನ್ನು ಉಚ್ಚರಿಸುವಾಗ ಕಡಿಮೆ ಸಮಯವನ್ನು ತೆಗೆದುಕೊಳ್ಳುತ್ತೇವೆಯೋ ಮತ್ತು ಬಾಯಿಂದ ಕಡಿಮೆ ಗಾಳಿಯನ್ನು ಹೊರಗೆ ಬಿಡುತ್ತೇವೆಯೋ ಅಂತಹ ಅಕ್ಷರಗಳನ್ನು ಅಲ್ಪಪ್ರಾಣ ವ್ಯಂಜನವೆಂದು ಕರೆಯುತ್ತೇವೆ. ಅವು ಯಾವುವೆಂದರೆ - ಕ, ಗ, ಙ, ಚ, ಜ, ಞ, ಟ, ಡ, ಣ, ತ, ದ, ನ, ಪ, ಬ, ಮ, ಯ, ರ, ಲ, ವ.

- **ಮಹಾಪ್ರಾಣ ವ್ಯಂಜನ** - ಯಾವ ಅಕ್ಷರಗಳನ್ನು ಉಚ್ಚರಿಸುವಾಗ ಹೆಚ್ಚು ಪ್ರಯತ್ನಪಟ್ಟು ಉಚ್ಚರಿಸುತ್ತೇವೆಯೋ ಮತ್ತು ಬಾಯಿಂದ ಹೆಚ್ಚು ಗಾಳಿಯನ್ನು ಬಿಡುತ್ತೇವೆಯೋ ಅಂತಹ ಅಕ್ಷರಗಳನ್ನು ಮಹಾಪ್ರಾಣ ವ್ಯಂಜನಗಳೆಂದು ಕರೆಯುತ್ತೇವೆ. ಇವುಗಳು ಒಟ್ಟು ಇವೆ. ಅವು ಯಾವುವೆಂದರೆ - ಖ, ಘ, ಛ, ಝ, ಠ, ಢ, ಥ, ಧ, ಫ, ಭ, ಶ, ಷ, ಸ, ಹ.

- **ಜಿಹ್ವಾಮೂಲೀಯ ವ್ಯಂಜನ** - ವಿಸರ್ಗವು ಕ್ ಮತ್ತು ಖ್ ಅಕ್ಷರಗಳ ಹಿಂದೆ ಬಂದಾಗ ಜಿಹ್ವಾಮೂಲೀಯವೆಂದು ಕರೆಯುತ್ತೇವೆ. ಆಗ ವಿಸರ್ಗದ ಉಚ್ಚಾರಣೆಯು ಅರ್ಧವಾಗುತ್ತದೆ. ಅದರ ಉಚ್ಚಾರಣೆಯು ಖ್ ಎಂದೇ ಆಗುತ್ತದೆ.

- **ಉಪಧ್ಮಾನೀಯ ವ್ಯಂಜನ** - ವಿಸರ್ಗವು ಪ್ ಮತ್ತು ಫ್ ಅಕ್ಷರಗಳ ಹಿಂದೆ ಬಂದಾಗ ಉಪಧ್ಮಾನೀಯವೆಂದು ಕರೆಯುತ್ತೇವೆ. ಆಗ ವಿಸರ್ಗದ ಉಚ್ಚಾರಣೆಯು ಅರ್ಧವಾಗುತ್ತದೆ. ಅದರ ಉಚ್ಚಾರಣೆಯು ಫ್ ಎಂದೇ ಆಗುತ್ತದೆ.

**|| ಸಮಾಪ್ತಿ ||**


ಬೇರೆ ಯಾವುದೇ ಸ್ಥಳದಲ್ಲಿ ಗೀತಾ ಪರಿವಾರ ಸಾಹಿತ್ಯವನ್ನು ಬಳಸಲು ಪೂರ್ವಾನುಮತಿ ಅಗತ್ಯವಿದೆ.